6

**ಕರ್ನಾಟಕ ಲೋಕಾಯುಕ್ತ**

ಸಂ.ಉಪಲೋಕ್-1/ಡಿಇ/50/2021/ಎಆರ್‌ಇ-19

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ಬೀದಿ,
ಬೆಂಗಳೂರು, ದಿ:07-10-2023.

**॥ವಿಚಾರಣಾ ವರದಿ ॥**

**ಉಪಸ್ಥಿತರು:- ಪ್ರಕಾಶ್ ನಾಡಿಗೇರ, ಅಪರ ನಿಬಂಧಕರು,**
ವಿಚಾರಣೆಗಳು-19, ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:-**

1. ಶ್ರೀ ಎಸ್. ಶಿವಕುಮಾರ್, ಮುಖ್ಯಾಧಿಕಾರಿಗಳು, ಪುರಸಭೆ ಕಛೇರಿ, ಭಾಲ್ಕಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ ಮತ್ತು
2. ಶ್ರೀ ವಾಹಿದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ ಕಛೇರಿ, ಭಾಲ್ಕಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವ ಕುರಿತು.

**ಉಲ್ಲೇಖ:-**

1. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.12(3)ರ ಅಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ ವರದಿ ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ /3388/2017/ಎಆರ್‌ಎಲ್‌ಓ-2, ದಿ:20-11-2020.
2. ಸರ್ಕಾರದ ಆದೇಶ ಸಂ: ನಅಇ 24 ಡಿಎಂಕೆ 2020, ಬೆಂಗಳೂರು, ದಿನಾಂಕ:17-03-2021.
3. ನಾಮನಿರ್ದೇಶನ ಸಂ.ಉಪಲೋಕ್-1/ಡಿಇ/50/2021, ಬೆಂಗಳೂರು, ದಿನಾಂಕ:01-04-2021.

*****

ದೂರುದಾರರಾದ **ಶ್ರೀ ರಾಜಕುಮಾರ್ ಕೆ. ನಿಟ್ಟೂರಕರ್, ಅಶೋಕನಗರ, ಭಾಲ್ಕಿ, ಬೀದರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಆಪಾದಿತ ಸರ್ಕಾರಿ ನೌಕರರಾದ (1) ಶ್ರೀ ಎಸ್. ಶಿವಕುಮಾರ್, ಮುಖ್ಯಾಧಿಕಾರಿಗಳು, ಪುರಸಭೆ ಕಛೇರಿ, ಭಾಲ್ಕಿ, ಭಾಲ್ಕಿ ತಾಲ್ಲೂಕು,

07/10

ಬೀದರ ಜಿಲ್ಲೆ ಹಾಗೂ (2) ಶ್ರೀ ವಾಹಿದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ ಕಛೇರಿ, ಭಾಲ್ಕಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರಿನಲ್ಲಿ ಬಾಲ್ಕಿ ತಾಲ್ಲೂಕಿನ ಬಾಲ್ಕಿ ಪುರಸಭೆಯಲ್ಲಿ 2017-18ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ ವಾಹನಗಳಿಗೆ ಡೀಸೆಲ್ ಹಾಕಿಸುವ ನೆಪದಲ್ಲಿ ಖಾಸಗಿ ವಾಹನಗಳಿಗೆ ಡೀಸೆಲ್ ಹಾಕಿಸಿ ಎದುರುದಾರರು ಅವ್ಯವಹಾರ ನಡೆಸಿದ್ದು, ಸದರಿ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿರುತ್ತದೆ.

2] ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.12(3)ರ ಅಡಿಯಲ್ಲಿ ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಉಲ್ಲೇಖ(2)ರಲ್ಲಿ ಕಾಣಿಸಿದಂತೆ, ಸರ್ಕಾರದ ಆದೇಶ ಸಂ: ನಅಇ 24 ಡಿಎಂಕೆ 2020, ಬೆಂಗಳೂರು, ದಿನಾಂಕ:17-03-2021ರ ಆದೇಶದಂತೆ, ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತ ರವರು ಉಲ್ಲೇಖ(3)ರಂತೆ ದಿನಾಂಕ:01-04-2021ರಂದು ಅಪರ ನಿಬಂಧಕರು, ವಿಚಾರಣೆಗಳು-19 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ.

3] ಮೇಲೆ ಹೇಳಿದ ಉಲ್ಲೇಖ(3)ರಲ್ಲಿ ನಮೂದಿಸಿರುವ ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶದ ಮೇರೆಗೆ **ಆ.ಸ.ನೌ-1 ಮತ್ತು 2 ರವರ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ದೋಷಾರೋಪಣೆಯನ್ನು ಆ.ಸ.ನೌ-1 ಮತ್ತು 2 ರವರಿಗೆ ದಿ:20-09-2021 ರಂದು ಕಳುಹಿಸಲಾಗಿರುತ್ತದೆ.

4] ನಂತರ ಆಪಾದಿತ ಸರ್ಕಾರಿ ನೌಕರರಾದ [ಅಸನೌ] (1) ಶ್ರೀ ಎಸ್. ಶಿವಕುಮಾರ್, ಮುಖ್ಯಾಧಿಕಾರಿಗಳು, ಪುರಸಭೆ ಕಛೇರಿ, ಭಾಲ್ಕಿ, ಮತ್ತು (2) ಶ್ರೀ ವಾಹಿದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ ಕಾರ್ಯಾಲಯ, ಭಾಲ್ಕಿ, ಬೀದರ ಜಿಲ್ಲೆ ಇವರುಗಳಿಗೆ ನೋಟೀಸ್‌ನೊಂದಿಗೆ ಸದರಿ ದೋಷಾರೋಪಣೆ, ದಾಖಲೆಗಳು ಮತ್ತು ಸಾಕ್ಷಿದಾರರ ಹೆಸರುಗಳು ಒಳಗೊಂಡ ದಾಖಲೆಗಳ ನಕಲುಗಳನ್ನು ಅಸನೌ–1 ಮತ್ತು 2 ರವರುಗಳಿಗೆ ಜಾರಿ ಮಾಡಿದ್ದು ಅದಕ್ಕೆ ಸ್ಪಂದಿಸಿ ಅಸನೌ ರವರುಗಳು ಸ್ವತ: ಹಾಜರಾದ ನಂತರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಸದರಿ ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರುಗಳು ತಮ್ಮ ತಪ್ಪೊಪ್ಪಿಕೊಳ್ಳದೆ, ಆರೋಪದ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5] ಆ.ಸ.ನೌ–1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6] **ದೂರಿನ ಸಂಕ್ಷಿಪ್ತ ಸಾರಾಂಶ:–** ಬೀದರ್ ಜಿಲೆಯ ಬಾಲ್ಕಿ ತಾಲ್ಲೂಕಿನ ಬಾಲ್ಕಿ ಪುರಸಭೆಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ ವಾಹನಗಳಿಗೆ ಡೀಸೆಲ್ ಹಾಕಿಸುವ ನೆಪದಲ್ಲಿ ಖಾಸಗಿ ವಾಹನಗಳಿಗೆ ಡೀಸೆಲ್ ಹಾಕಿಸಿ ಎದುರುದಾರರು ಅವ್ಯವಹಾರ ನಡೆಸಿರುತ್ತಾರೆ. ಆದ್ದರಿಂದ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರಿ ಈ ಕೆಳಕಂಡಂತೆ ಆರೋಪಿಸಿರುತ್ತಾರೆ.

(1) ಬಾಲ್ಕಿ ಪುರಸಭೆಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿನ ವಾಹನಗಳ ಹೆಸರಿನಲ್ಲಿ ಖರೀದಿಸಿದ ಇಂಧನವನ್ನು ಖಾಸಗಿ ವಾಹನಗಳಿಗೆ ಬಳಸಿಕೊಂಡು ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ.

(2) ಪುರಸಭೆಗೆ ಸಂಬಂಧಪಟ್ಟ ವಾಹನಗಳನ್ನು ನೋಂದಣಿ ಮಾಡಿಸದೆ ಹಾಗೆಯೇ ಚಾಲನೆ ಮಾಡುತ್ತಿರುತ್ತಾರೆ ಹಾಗೂ ಪುರಸಭೆಯಲ್ಲಿ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕ ಅಥವಾ ವಾಹನ ಚಾಲಕರು ಚಾಲನಾ ಪರವಾನಗಿ ಇಲ್ಲದೆ ಪುರಸಭೆಯ ವಾಹನಗಳನ್ನು ಚಾಲನೆ ಮಾಡುತ್ತಿದ್ದಾರೆ.

07/10/23

(3) ಪುರಸಭೆಯ ಪರಿಮಿತಿಯಲ್ಲಿ ಚರಂಡಿ ಸ್ವಚ್ಚತಾ ಕಾರ್ಯ ಸರಿಯಾಗಿ ನಿರ್ವಹಿಸುತ್ತಿಲ್ಲ ಹಾಗೂ ಪೌರಕಾರ್ಮಿಕರಿಗೆ ಸಮವಸತ್ರ, ಶೂ, ಗ್ಲೌಸ್ ಮತ್ತು ಇನ್ನಿತರ ವಸ್ತುಗಳನ್ನು ವಿತರಣೆ ಮಾಡುತ್ತಿಲ್ಲ ಹಾಗೂ ಕಾಲಕಾಲಕ್ಕೆ ಪೌರಕಾರ್ಮಿಕರ ಆರೋಗ್ಯ ತಪಾಸಣೆ ಮಾಡಿತ್ತಿಲ್ಲ ಮತ್ತು ಪೌರಕಾರ್ಮಿಕರನ್ನು ಅದಿಕಾರಿಗಳಿಗೆ ತಮ್ಮ ಖಾಸಗಿ ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ.

(4) ಪುರಸಭೆಯಿಂದ ಶೌಚಾಲಯ ಕಟ್ಟಿಸುತ್ತಿರುವ ಫಲಾನುಭವಿಗಳ ಹತ್ತಿರ ಅಧಿಕಾರಿಗಳು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಹಾಗೂ ಹಣ ತೆಗೆದುಕೊಂಡು ಒಂದೇ ಮನೆಗೆ ಎರಡೆರಡು ಶೌಚಾಲಯ ನಿರ್ಮಾಣದ ಅನುದಾನ ನೀಡಿ ಕರ್ತವ್ಯ ಲೋಪ ಮತ್ತು ಅಧಿಕಾರ ದುರ್ಬಳಕೆ ಮಾಡಿಕೊಂಡು ಸಾರ್ವಜನಿಕ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ದುರ್ನಡತೆ ಎಸಗಿರುತ್ತಾರೆ. ಕಾರಣ ದೂರುದಾರರು ಪ್ರಸ್ತುತ ದೂರನ್ನು ಅಸನೌ–1 ಮತ್ತು 2 ರವರ ವಿರುದ್ಧ ಸಲ್ಲಿಸಿದ್ದು ಇಲಾಖಾ ವಿಚಾರಣೆಯನ್ನು ಕೈಗೊಂಡಿದ್ದು, ನನ್ನ ಹಿಂದಿನ ಎಆರ್‌ಇ–19 ಅಧಿಕಾರಿಯವರು ಈ ಕೆಳಗಿನಂತೆ ದೋಷಾರೋಪಣೆಯನ್ನು ತಯಾರಿಸಿದ್ದು ಇರುತ್ತದೆ.

7] ಆಸನೌ ಆದ ನೀವು,

(ಎ) 2017–18ನೇಯ ಸ್ವಚ್ಚ ಭಾರತ್ ಮಿಷನ್ ಅಡಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ ವಾಹನಗಳಿಗೆ ಡೀಸೆಲ್ ಹಾಕಿಸುವ ನೆಪದಲ್ಲಿ ಖಾಸಗಿ ವಾಹನಗಳಿಗೆ ಡೀಸೆಲ್ ಹಾಕಿಸಿ ಅವ್ಯವಹಾರ ನಡೆಸಿರುತ್ತೀರಿ.

(ಬಿ) ಇಲಾಖೆಯ ನಿಯಮಾವಳಿಗಳನ್ನು ಪಾಲನೆ ಮಾಡದೆ ಖಾಸಗಿ ವಾಹನ ಸಂ.ಕೆಎ–38/ಎಂ–2862 (ಮುಖ್ಯಾಧಿಕಾರಿಯವರು ಉಪಯೋಗಿಸುವ ವಾಹನ)ಕ್ಕೆ ಪುರಸಭೆಯ ಇಂಡೆಂಟ್ ಮೂಲಕ ಇಂಧನ ಬಳಕೆ ಮಾಡಿಕೊಂಡು, ವಾಹನದ ಲಾಗ್ ಪುಸ್ತಕ ನಿರ್ವಹಣೆ ಮಾಡದೆ, ಲಾಗ್ ಪುಸ್ತಕಗಳು ಇಲ್ಲದೆ ಇಂಧನ ಬಾಬ್ತು ಹಣ ಮಂಜೂರು ಮಾಡಿ ನೀವು ಕರ್ತವ್ಯಲೋಪವೆಸಗಿರುತ್ತೀರಿ.

(ಸಿ) ಪುರಸಭೆ ವಾಹನಗಳನ್ನು ಹೊರತುಪಡಿಸಿ ಖಾಸಗಿ ವಾಹನಗಳಿಗೆ ಪುರಸಭೆಯ ಇಂಡೆಂಟ್ ಮೂಲಕ ಇಂಧನ ಹಾಕಿಸಿ ಸದರಿ ಇಂಧನದ ಹಣವನ್ನು ಪಾವತಿ ಮಾಡಿ ಪುರಸಭೆಯ ಅನುದಾನ ದುರುಪಯೋಗಪಡಿಸಿಕೊಂಡಿರುತ್ತೀರಿ.

10



(ಡಿ) ವಾಹನಗಳಿಗೆ ಇಂಧನ ಬರಿಸಲು ನೀಡುವ ಇಂಡೆಂಟ್‌ಗಳ ನಿರ್ವಹಣೆ ಸರಿಯಾಗಿ ಮಾಡಿರುವುದಿಲ್ಲ ಹಾಗೂ ಒಂದು ಇಂಡೆಂಟ್ ಪುಸ್ತಕ ಮುಗಿಯದಿದ್ದರೂ ಸಹ ಮತ್ತೊಂದು ಇಂಡೆಂಟ್ ಉಪಯೋಗಿಸುತ್ತೀರಿ.

(ಇ) ಪುರಸಭೆಗೆ ಸಂಬಂಧಪಟ್ಟ ವಾಹನಗಳನ್ನು ನೋಂದಣಿ ಮಾಡಿಸದೆ ಹಾಗೆಯೇ ಚಾಲನೆ ಮಾಡುತ್ತಿರುತ್ತೀರಿ ಹಾಗೂ ಪುರಸಭೆಯಲ್ಲಿ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕ ಅಥವಾ ವಾಹನ ಚಾಲಕರು ಚಾಲನ ಪರವಾನಗಿ ಇಲ್ಲದೆ ಪುರಸಭೆಯ ವಾಹನಗಳನ್ನು ಚಾಲನೆ ಮಾಡಿಸಿದ್ದೀರಿ.

(ಎಫ್) ಪುಸಬೇಯ ಪರಿಮಿತಿಯಲ್ಲಿ ಚರಂಡಿ ಸ್ವಚ್ಚತಾ ಕಾರ್ಯ ಸರಿಯಾಗಿ ನಿರ್ವಹಿಸುತ್ತಿಲ್ಲ ಹಾಗೂ ಪೌರಕಾರ್ಮಿಕರಿಗೆ ಸಮವಸ್ತ್ರ, ಶೂ, ಗ್ಲೌಸ್ ಮತ್ತು ಇನ್ನಿತರ ವಸ್ತುಗಳನ್ನು ವಿತರಣೆ ಮಾಡುತ್ತಿಲ್ಲ ಹಾಗೂ ಕಾಲಕಾಲಕ್ಕೆ ಪೌರಕಾರ್ಮಿಕರ ಆರೋಗ್ಯ ತಪಾಸಣೆ ಮಾಡಿಸುತ್ತಿಲ್ಲ ಮತ್ತು ಪೌರಕಾರ್ಮಿಕರನ್ನು ನಿಮ್ಮ ಖಾಸಗಿ ಕೆಲಸಕ್ಕೆ ಬಳಸಿಕೊಂಡಿದ್ದೀರಿ.

(ಜಿ) ಪುರಸಭೆಯಿಂದ ಶೌಚಾಲಯ ಕಟ್ಟಿಸುತ್ತಿರುವ ಫಲಾನುಭವಿಗಳ ಹತ್ತಿರ ಅಧಿಕಾರಿಗಳು ಹಣವನ್ನು ತೆಗೆದುಕೊಂಡಿದ್ದೀರಿ ಹಾಗೂ ಹಣ ತೆಗೆದುಕೊಂಡು ಒಂದೇ ಮನೆಗೆ ಎರಡೆರಡು ಶೌಚಾಲಯ ನಿರ್ಮಾಣದ ಅನುದಾನ ನೀಡಿರುತ್ತೀರಿ.

ಆದ್ದರಿಂದ, ಸರ್ಕಾರಿ ನೌಕರರಾದ ನೀವು, ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಪರಿಪೂರ್ಣ ಪ್ರಾಮಾಣಿಕತೆ ತೋರಿಸದೇ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಿರೆಂದು ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿಬಂಧ ಮತ್ತು ಮೇಲ್ಮನವಿ) 1957ರ ಮೇರೆಗೆ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

7/10

8] ಸದರಿ ದೋಷಾರೋಪಣೆಯನ್ನು ಅಸನೌ ರವರ ವಿರುದ್ದ ರುಜುವಾತುಪಡಿಸಲು ಸಕ್ಷಮ ಪ್ರಾಧಿಕಾರದ ಪರವಾಗಿ ಪಿಡ.ಬ್ಲ್ಯೂ–1 ಮತ್ತು 24 ರವರುಗಳ ವಿಚಾರಣೆ ಮಾಡಿದ್ದು, ನಿಶಾನೆ ಪಿ–1 ರಿಂದ ನಿಶಾನೆ ಪಿ–19 ರವರೆಗೆ ದಾಖಲೆಗಳನ್ನು ಹಾಜರಪಡಿಸಿರುತ್ತಾರೆ. ಆಸನೌ ರವರು ತಮ್ಮ ರಕ್ಷಣಾತ್ಮಕವಾಗಿ ಸ್ವತ: ತಾವೇ ಡಿ.ಡಬ್ಲ್ಯೂ–1 ಮತ್ತು 2 ಎಂದು ಸಾಕ್ಷಿ ನುಡಿದಿರುತ್ತಾರೆ. ಮತ್ತು ನಿಶಾನೆ ಡಿ–1 ರಿಂದ ಡಿ–12 ರವರೆಗೆ ದಾಖಲೆಗಳನ್ನು ಗುರ್ತಿಸಿಕೊಂಡಿರುತ್ತಾರೆ.

9] ನಾನು ಸಕ್ಷಮ ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳಾದ ಶ್ರೀ ನಾಗಪ್ಪ ಹಾಗೂ ಅಸನೌ ರವರ ಪರವಾಗಿ ನ್ಯಾಯವಾದಿಗಳಾದ ಶ್ರೀಮತಿ ನಂದಾ ಜೋಶಿ ಸಿ. ಇವರ ವಾದ ವಿವಾದಗಳನ್ನು ಆಲಿಸಿರುತ್ತೇನೆ. ಪ್ರಕರಣದಲ್ಲಿ ಹಾಜರಪಡಿಸಲಾದ ಮೌಖಿಕ ಹಾಗೂ ದಾಖಲೆಗಳ ಸಾಕ್ಷಿಯನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ.

10] ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:–** ಸಕ್ಷಮ ಪ್ರಾಧಿಕಾರದವರು ಅಸನೌ ರವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1) (i) ಮತ್ತು (iii)ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಿರುತ್ತಾರೆಯೇ?

**ಅಂಶ–2 :–** ಆದೇಶವೇನು?

11] ಈ ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ–1 :– ಭಾಗಶ: ಸಕಾರಾತ್ಮಕ**

**ಅಂಶ–2:–** ಅಂತಿಮ ಆದೇಶದಂತೆ.

07/10

॥ **ಕಾರಣಗಳು** ॥

12] **ಅಂಶ–1:–** ಪ್ರಸ್ತುತ ಪ್ರಕರಣದಲ್ಲಿ ನಿರ್ವಿವಾದದ ಸಂಗತಿಗಳೆಂದರೆ ಅಸನೌ 1 ಮತ್ತು 2 ರವರು 2017–18ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಭಾಲ್ಕಿ ಪುರಸಭೆಯ ಮುಖ್ಯಾಧಿಕಾರಿ ಮತ್ತು ಆರೋಗ್ಯ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

13] ಈಗಾಗಲೇ ಮೇಲೆ ಹೇಳಿರುವಂತೆ ದೋಷಾರೋಪಣೆಯ ಪ್ರಕಾರ 2017–18ನೇ ಸಾಲಿನಲ್ಲಿ ಸ್ವಚ್ಚ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ನಡೆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪುರಸಭೆಯಿಂದ ಉಪಯೋಗಿಸುವ ವಾಹನಗಳಿಗೆ ಡೀಸೆಲ್ ಹಾಕಿಸುವ ನೆಪದಲ್ಲಿ ಸಂಖ್ಯೆ ಕೆಎ–38 ಎಂ–2262 ಖಾಸಗಿ ವಾಹನಕ್ಕೆ ಇಂಡೆಂಟ್ ನೀಡುವ ಮೂಲಕ ಡೀಸೆಲ್ ಹಾಕಿಸಿ, ಲಾಗ್ ಪುಸ್ತಕ ನಿರ್ವಹಣೆ ಮಾಡದೆ ಆಸನೌ–1 ಮತ್ತು 2 ರವರುಗಳು ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಈ ವಿಚಾರವಾಗಿ ಇಂಡೆಂಟ್‌ಗಳ ನಿರ್ವಹಣೆಯನ್ನು ಸರಿಯಾಗಿ ಮಾಡಿರುವುದಿಲ್ಲ ಒಂದು ಇಂಡೆಂಟ್ ಪುಸ್ತಕ ಮುಗಿಯದಿದ್ದರೂ ಸಹಾ ಮತ್ತೊಂದು ಇಂಡೆಂಟ್ ಪುಸ್ತಕ ಉಪಯೋಗಿಸಿರುತ್ತಾರೆ. ಪುರಸಭೆಗೆ ಸಂಬಂಧಪಟ್ಟ ವಾಹನಗಳನ್ನು ನೋಂದಣಿ ಮಾಡಿಸದೇ ಹಾಗೆ ಚಾಲನೆ ಮಾಡಲು ಕಾರಣಿಕರ್ತರಾಗಿರುತ್ತಾರೆ. ಮತ್ತು ಚಾಲನಾ ಪರವಾನಿಗೆ ಪತ್ರ ಇಲ್ಲದ ಪುರಸಭೆಯ ಪೌರಕಾರ್ಮಿಕರಿಗೆ ಪುರಸಭೆ ವಾಹನಗಳನ್ನು ಚಾಲನೆ ಮಾಡಲು ನೀಡಿದ್ದು ಇರುತ್ತದೆ. ಮತ್ತು ಚರಂಡಿ ಸ್ವಚ್ಚತಾ ಕಾರ್ಯ ಸರಿಯಾಗಿ ನಿರ್ವಹಿಸದೇ ಪೌರಕಾರ್ಮಿಕರಿಗೆ ಸಮವಸ್ತ್ರ, ಶೂ, ಬ್ಲೌಸ್ ಮುಂತಾದ ವಸ್ತುಗಳನ್ನು ನಿರ್ವಹಣೆ ಮಾಡದೇ ಕಾಲಕಾಲಕ್ಕೆ ಪೌರ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಿಸದೇ ಅವರನ್ನು ತಮ್ಮ ಖಾಸಗಿ ಕಾರ್ಯಗಳಿಗೆ ಉಪಯೋಗಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಅಲ್ಲದೆ ಪುರಸಭೆಯಿಂದ ಶೌಚಾಲಯವನ್ನು ಕಟ್ಟಿಸುವ ಫಲಾನುಭವಿಗಳ ಹತ್ತಿರ ಹಣ ಪಡೆದು ಒಂದೇ ಮನೆಗೆ ಎರಡೆರಡು ಶೌಚಾಲಯ ನಿರ್ಮಾಣ ಮಾಡಲು ಅನುದಾನವನ್ನು ನೀಡಿರುತ್ತಾರೆ ಎಂದು ಸ್ಪಷ್ಟವಾದ ಆಪಾದನೆ ಇರುತ್ತದೆ.

07/10/23

14] ಸದರಿ ಆಪಾದನೆಗಳು ರುಜುವಾತಾಗಿದೆಯೇ ಎನ್ನುವ ಕುರಿತು ಆಪಾದನೆಗಳನ್ನು ಒಂದೊಂದಾಗಿ ಪರಿಶೀಲನೆ ಮಾಡುವುದು ಅವಶ್ಯಕವಾಗಿರುತ್ತದೆ. ಈ ಪ್ರಕರಣದಲ್ಲಿ ದೂರನ್ನು ಪಡೆದು ಅದರ ವಿಚಾರಣಾ ಹಂತದಲ್ಲಿ ನಮ್ಮ ಸಂಸ್ಥೆಯ ಬೀದರ ಕಲೋ ಪೊಲೀಸ್ ಉಪಾಧೀಕ್ಷಕರ ಮೂಲಕ ದೂರಿನ ಸಂಗತಿಯ ಕುರಿತು ತನಿಖೆಯನ್ನು ಮಾಡಿಸಿ ವರದಿಯನ್ನು ಪಡೆದುಕೊಂಡಿದ್ದು ಇರುತ್ತದೆ. ದೂರುದಾರರಾದ ಶ್ರೀ ರಾಜಕುಮಾರ್ ನಿಟ್ಟೂರಕರ ಇವರು ನೀಡಿದ ತಮ್ಮ ಸಾಕ್ಷಿಯಲ್ಲಿ ದೂರಿನಲ್ಲಿ ಹೇಳಿದ ವಿಚಾರಗಳನ್ನೇ ಪುನರುಚ್ಚರಿಸಿದ್ದು, ತಮ್ಮ ದೂರು, ಪ್ರಪತ್ರ-1 ಮತ್ತು 2 ಹಾಗೂ ದೂರಿನೊಂದಿಗೆ ಹಾಜರಪಡಿಸಿದ ಪುರಸಭೆಯ ವಾಹನಗಳ 3 ಫೋಟೋಗಳನ್ನು ಗುರ್ತಿಸಿದ್ದು, ಅವುಗಳನ್ನು ಕ್ರಮವಾಗಿ ನಿಶಾನೆ ಪಿ-1 ರಿಂದ 4 ಎಂದು ಗುರ್ತಿಸಲಾಗಿದೆ. ಈ ಸಾಕ್ಷಿದಾರರು ತಮ್ಮ ಹೇಳಿಕೆಯಲ್ಲಿ ಕೇವಲ ಆಸನೌ-1 ಮತ್ತು 2 ರವರುಗಳು ತಮ್ಮ ಸ್ವಂತ ಉಪಯೋಗಕ್ಕಾಗಿ ಖಾಸಗಿ ವಾಹನಗಳಿಗೆ ಇಂಧನವನ್ನು ಹಾಕಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ ಮತ್ತು ಪುರಸಭೆಯ ವಾಹನಗಳನ್ನು ನೋಂದಾವಣೆ ಮಾಡಿಸದೇ ಅವುಗಳನ್ನು ಪುರಸಭೆ ಕರ್ತವ್ಯಕ್ಕೆ ಬಳಸಲು ಉಪಯೋಗಿಸಿರುತ್ತಾರೆ. ಮತ್ತು ವಾಹನಗಳನ್ನು ನಿಯಮಗಳನ್ನು ಉಲ್ಲಂಘನೆ ಮಾಡಿ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ತಾವು ಮಾಡಿರುವ ಆಪಾದನೆಗಳನ್ನು ಸಮರ್ಥಿಸುವಂತೆ ತಮ್ಮ ಮೌಖಿಕ ಹೇಳಿಕೆಗಳನ್ನು ಬಿಟ್ಟರೆ ಬೇರೆ ಯಾವುದೇ ಪೂರಕವಾದ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ನಿಶಾನೆ ಪಿ-4ರಲ್ಲಿ ಹಾಜರಪಡಿಸಿರುವ ಫೋಟೋಗಳಲ್ಲಿ ಕಾಣುವಂತಹ ವಾಹನಗಳು, ಹೊಸ ವಾಹನಗಳು ಎಂದು ಕಂಡುಬರುತ್ತದೆ ಮತ್ತು ಅವುಗಳಿಗೆ ನೋಂದಣಿ ಸಂಖ್ಯೆನ್ನು ಅಳವಡಿಸದೇ ಇರುವದು ಸಹ ಕಂಡುಬರುತ್ತದೆ. ಆದರೆ, ಕೇವಲ ಫೋಟೋಗಳನ್ನು ಆಧರಿಸಿ ನೋಂದಣಿಯಾಗದ ಆ ವಾಹನಗಳನ್ನು ಪುರಸಭೆಯ ಕೆಲಸಗಳಿಗಾಗಿ ಉಪಯೋಗಿಸಲು ನೀಡಿರುತ್ತಾರೆ ಅನ್ನುವುದನ್ನು ನಂಬಲು ಸಾಧ್ಯವಿರುವುದಿಲ್ಲ. ಅಲ್ಲದೆ ಸದರಿ ವಾಹನಗಳು ಫೋಟೋದಲ್ಲಿ ಕಾಣುವಂತೆ ಸ್ವಚ್ಛತಾ ಕಾರ್ಯಕ್ಕೆ ಉಪಯೋಗಿಸಿರುವಂತೆ ಕಾಣುತ್ತಿರುವುದಿಲ್ಲ. ನಂತರದಲ್ಲಿ ಆ ವಾಹನಗಳ ನೋಂದಣಿ ಮಾಡಿಸಿ ಅವುಗಳನ್ನು ಪುರಸಭೆಯ ಕಾರ್ಯಗಳಿಗಾಗಿ ಉಪಯೋಗಿಸಿರಬಹುದು ಎನ್ನುವುದನ್ನು ತಳ್ಳಿಹಾಕಲಾಗದು.

15] ತನಿಖಾಧಿಕಾರಿಗಳಾದ ಶ್ರೀ ನೀಲಪ್ಪ ಮಲ್ಲಪ್ಪ ಓಲೇಕಾರ, ಡಿ.ಎಸ್.ಪಿ, ಕಲೋ, ಬೀದರ ಇವರನ್ನು ಪಿ.ಡಬ್ಲ್ಯೂ-2 ಎಂದು ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಿದ್ದು, ಸದರಿಯವರು ಭಾಲ್ಕಿ ಪುರಸಭೆಯ ಮುಖ್ಯಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಿ 2017-18ನೇ ಸಾಲಿನ ಸ್ವಚ್ಚ ಭಾರತ ಮಿಷನ್ ಯೋಜನೆ ಅನುಷ್ಟಾನದ ವಿಚಾರದಲ್ಲಿ ಪುರಸಭೆಯಿಂದ ಉಪಯೋಗಿಸಲಾದ ವಾಹನಗಳ ಲಾಗ್ ಪುಸ್ತಕ, ವಾಹನಗಳ ವಿವರ, ಅವುಗಳಿಗೆ ಇಂಧನ ಹಾಕಿಸಿದ ಕುರಿತು ದಾಖಲೆ ಮತ್ತು ಪೌರಕಾರ್ಮಿಕರಿಗೆ ಸ್ವಚ್ಚತಾ ಕಾರ್ಯಕ್ಕಾಗಿ ಸಮವಸ್ತ್ರ, ಶೂ, ಗ್ಲೌಸ್, ಮುಂತಾದ ವಸ್ತುಗಳ ವಿತರಣೆ ಇವುಗಳ ವಿಚಾರವಾಗಿ ದಾಖಲೆಗಳನ್ನು ಮತ್ತು ಮಾಹಿತಿಯನ್ನು ನೀಡುವಂತೆ ಕೋರಿಕೊಂಡು ಅವುಗಳನ್ನು ಪಡೆದುಕೊಂಡಿದ್ದು ಇರುತ್ತದೆ. ಆ ರೀತಿ ತಾವು ಬರೆದ ಕಛೇರಿಯ ಪತ್ರದ ನಕಲನ್ನು ಹಾಜರಪಸಿಡಿದ್ದು ನಿಶಾನೆ ಪಿ-5 ಇರುತ್ತದೆ. ಸದರಿ ಪತ್ರಕ್ಕೆ ಉತ್ತರವಾಗಿ ಪುರಸಭೆಯ ಮುಖ್ಯಾಧಿಕಾರಿಗಳು ನಿಶಾನೆ ಪಿ-6 ಪತ್ರದ ಮೂಲಕ ಹಾಜರಪಡಿಸಿದ ದಾಖಲೆಗಳನ್ನು ಗುರ್ತಿಸಿ ಹಾಜರಪಡಿಸಿರುತ್ತಾರೆ. ಆಸನೌ-1 ರವರು ಆಪಾದನೆಗಳಿಗೆ ಸಂಬಂಧಿಸಿದಂತೆ ಒಂದು ಪತ್ರವನ್ನು ಕೂಡಾ ಬರೆದು ತಮ್ಮ ವಿವರಣೆ ನೀಡಿರುವುದನ್ನು ಹಾಜರಪಡಿಸಿದ್ದು, ಅದು ನಿಶಾನೆ ಪಿ-7 ಎಂದು ಗುರ್ತಿಸಲ್ಪಟಿದೆ. ಅಸನೌ-2 ಇವರು ತನಿಖಾಧಿಕಾರಿಯವರಿಗೆ ಬರವಣಿಗೆಯಲ್ಲಿ ಕಳುಹಿಸಿ ದಾಖಲೆಗಳನ್ನು ಕ್ರಮವಾಗಿ ನಿಶಾನೆ ಪಿ-8 ಮತ್ತು 9 ಎಂದು ಗುರ್ತಿಸಲಾಗಿದೆ. ನಿಶಾನೆ ಪಿ-6 ಆಸನೌ-1 ಪುರಸಭೆಯ ಮುಖ್ಯಾಧಿಕಾರಿಗಳು ನೀಡಿದ ಪತ್ರವನ್ನು ಪರಿಶೀಲಿಸಲಾಗಿ ಸದರಿ ಪತ್ರದಲ್ಲಿ ಸ್ವಚ್ಚ ಭಾರತ ಮಿಷನ್ ಯೋಜನೆ ಅಡಿ ಸ್ವಚ್ಚತಾ ಕಾರ್ಯಕ್ಕಾಗಿ ನಿಯೋಜಿಸಿದ ಟಾಟಾಎಸ್ ವಾಹನಗಳ ವಿವರಗಳನ್ನು ನೀಡಿರುವುದಲ್ಲದೆ ಯಾವುದೇ ವಾಹನವನ್ನು ಗುತ್ತಿಗೆ ಆಧಾರದ ಮೇಲೆ ಸದರಿ ಕಾರ್ಯಕ್ಕಾಗಿ ಪಡೆದಿರಲಿಲ್ಲ ಅನ್ನುವುದನ್ನು ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಮತ್ತು ಚಾಲಕರ ಹೆಸರುಗಳನ್ನು ನೀಡಿರುವುದಲ್ಲದೆ ಅವರುಗಳ ಚಾಲನಾ ಪ್ರಮಾಣ ಪತ್ರದ ನಕಲುಗಳನ್ನು ಸಹ ಹಾಜರಪಡಿಸಿದ್ದು ಇರುತ್ತದೆ. ಇದಲ್ಲದೆ ಮುಖ್ಯಾಧಿಕಾರಿಗಳು ಆ ಪತ್ರದಲ್ಲಿ ಉಲ್ಲೇಖಿಸಿದ ವಾಹನಗಳ ಲಾಗ್ ಪುಸ್ತಕ

07/10/23

ಇರುವುದಿಲ್ಲ ಅನ್ನುವುದನ್ನು ಸ್ಪಷ್ಟವಾಗಿ ನಮೂದಿಸಿದ್ದು ದೂರುದಾರರು ಆಪಾದಿಸಿರುವಂತೆ ಲಾಗ್ ಪುಸ್ತಕ ನಿರ್ವಹಣೆ ಮಾಡಿರುವುದಿಲ್ಲ ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

16] ಆಸನೌ–1 ಮತ್ತು 2 ಇವರುಗಳ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸುತ್ತಾ, ಲಾಗ್ ಪುಸ್ತಕಗಳನ್ನು ಸಾಕ್ಷಿದಾರರ ವಿಚಾರಣೆ ಕಾಲದಲ್ಲಿ ಹಾಜರಪಡಿಸಲಾಗಿದೆ ಎಂದು ವಾದ ಮಂಡಿಸಿರುತ್ತಾರೆ. ಸದರಿ ಲಾಗ್ ಪುಸ್ತಕಗಳನ್ನು ಅಸನೌ–1 ತಮ್ಮ ಸಾಕ್ಷಿಯನ್ನು ಡಿ.ಡಬ್ಲ್ಯೂ–7 ರಿಂದ 9 ಎಂದು ಹಾಜರಪಡಿಸಿರುತ್ತಾರೆ. ನಿಶಾನೆ ಡಿ–7 ಸೋನಾಲಿಕ ಟ್ರ್ಯಾಕ್ಟರ್ ನೋಂದಣಿ ಸಂ.ಕೆಎ–28/ಎನ್‌ಟಿಓ 13629 ವಾಹನದ ಲಾಗ್ ಪುಸ್ತಕದ ನಕಲು ಇರುತ್ತದೆ. ನಿಶಾನೆ ಡಿ–8 ಸೋನಾಲಿಕ ಟ್ರ್ಯಾಕ್ಟರ್ ಕೆಎ–28/ಎನ್‌ಟಿಓ 13630 ಈ ವಾಹನದ ಲಾಗ್ ಪುಸ್ತಕವಾಗಿರುತ್ತದೆ. ಅದೇ ರೀತಿ ನಿಶಾನೆ ಡಿ–9 ಕೆಎ–39/ 9063 ನೋಂದಣಿ ಸಂಖ್ಯೆ ಹೊಂದಿದ ಜೆಸಿಬಿ ವಾಹನದ್ದಾಗಿರುತ್ತದೆ. ಆದರೆ, ನಿಶಾನೆ ಪಿ–6 ಮುಖ್ಯಾಧಿಕಾರಿಗಳು ಬರೆದ ಪತ್ರದಲ್ಲಿ ನಮೂದಿಸಿರುವ ಟಾಟಾಎಸ್ ವಾಹನ ಮತ್ತು ಬೇರೆ ಉಳಿದ ವಾಹನಗಳ ಲಾಗ್ ಪುಸ್ತಕ ಹಾಜರಪಡಿಸಲ್ಪಟ್ಟಿರುವುದಿಲ್ಲ ಮತ್ತು ಈಗಾಗಲೇ ಹೇಳಿರುವಂತೆ ಸ್ವತ: ಮುಖ್ಯಾಧಿಕಾರಿಗಳೆ ಆ ವಾಹನಗಳ ಲಾಗ್ ಪುಸ್ತಕ ಇರುವುದಿಲ್ಲ ಎನ್ನುವುದನ್ನು ಆ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿದ್ದು, ಆಸನೌ–1 ಮತ್ತು 2 ಇವರುಗಳು ವಾಹನಗಳಿಗೆ ಇಂಧನ ಹಾಕಿಸುವ ಕುರಿತು ಪುರಸಭೆಯ ಎಲ್ಲ ವಾಹನಗಳ ಲಾಗ್ ಪುಸ್ತಕಗಳನ್ನು ನಿರ್ವಹಣೆ ಮಾಡಿರುವುದಿಲ್ಲ ಅನ್ನುವ ಸಂಗತಿ ಸ್ಪಷ್ಟವಾಗಿರುತ್ತದೆ. ನಿಶಾನೆ ಪಿ–12ರ ದಾಖಲೆ ಸಹ ಪುರಸಭೆಯ ಮುಖ್ಯಾಧಿಕಾರಿಗಳು ಡಿ.ಎಸ್.ಪಿ ರವರಿಗೆ ದಿ:19–08–2019ರಂದು ಬರೆದ ಪತ್ರವಾಗಿದ್ದು, ಆ ಪತ್ರದಲ್ಲಿಯೂ ಸಹಾ ಇಲಾಖಾ ವಾಹನಗಳಿಗೆ ಇಂಧನ ಬಳಸಿದ ಲಾಗ್ ಪುಸ್ತಕ ನಿರ್ವಹಣೆ ಮಾಡಿರುವುದಿಲ್ಲ ಎನ್ನುವ ಸಂಗತಿಯನ್ನು ಆ ಪತ್ರದ ಕ್ರಮ ಸಂಖ್ಯೆ 6ರ ಕಾಲಂನಲ್ಲಿ ಕೇಳಿರುವ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ನೀಡುವ ಮೂಲಕ ವಾಹನಗಳ ಲಾಗ್ ಪುಸ್ತಕವನ್ನು ನಿರ್ವಹಣೆ ಮಾಡಿರುವುದಿಲ್ಲ ಅನ್ನುವ ಸಂಗತಿಯನ್ನು ಒಪ್ಪಿಕೊಂಡಿರುತ್ತಾರೆ.

/L



17] ನಿಶಾನೆ ಪಿ–6 ಪತ್ರದೊಂದಿಗೆ ಅಸನೌ–1 ಪುರಸಭೆಯ ಮುಖ್ಯಾಧಿಕಾರಿಯವರು 2017 ಮಾರ್ಚ್ ತಿಂಗಳಿನಿಂದ 2018 ಮಾರ್ಚ್‌ವರೆಗಿನ ವಾಹನಗಳಿಗೆ ಇಂಧನ ಹಾಕಿಸಿದ ಕುರಿತು ಕ್ರೆಡಿಟ್ ಬಿಲ್ಲಗಳನ್ನು ಹಾಜರಪಡಿಸಿರುತ್ತಾರೆ. ಈ ದಾಖಲೆಗಳು ವಿವಾದಕ್ಕೆ ಒಳಗಾಗಿರುವಂತಹ ದಾಖಲೆಗಳ ಅಲ್ಲ. ಸದರಿ ದಾಖಲೆಗಳನ್ನು ಸ್ವತ: ಅಸನೌ–1 ತಮ್ಮ ಕಛೇರಿ ಪತ್ರ ನಿಶಾನೆ ಪಿ–6ಕ್ಕೆ ಲಗತ್ತಿಸಿ ತನಿಖಾಧಿಕಾರಿಯವರಿಗೆ ಮಾಹಿತಿ ನೀಡಿದ್ದು ಇರುತ್ತದೆ. ಮತ್ತು ತನಿಖಾಧಿಕಾರಿಯವರು ಆ ಸಂಗತಿಯನ್ನು ಸಾಕ್ಷಿ ವಿಚಾರಣೆ ಕಾಲದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಅಲ್ಲದೆ ಪಿಡಬ್ಲು–2 ತನಿಖಾಧಿಕಾರಿಗಳು ತಮ್ಮ 23–7–2019ರ ನಿಶಾನೆ ಪಿ–11ರ ಪತ್ರದ ಮೂಲಕ ಭಾಲ್ಕಿ ಪುರಸಭೆಯ ಮುಖ್ಯಾಧಿಕಾರಿಯವರಿಗೆ 2017–18ನೇ ಸಾಲಿನಲ್ಲಿ ಪುರಸಭೆಯ ವಾಹನಗಳಿಗೆ ಇಂಧನ ಖರೀದಿಸಿದ ಕ್ರೆಡಿಟ್ ಬಿಲ್ಲ್‌ಗಳಿಗೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ನೀಡಲು ಕೋರಿದ್ದು, ಅದಕ್ಕೆ ಉತ್ತರವಾಗಿ ಪುರಸಭೆಯ ಮುಖ್ಯಾಧಿಕಾರಿಗಳು ನಿಶಾನೆ ಪಿ–12ರಂತೆ ತಮ್ಮ ಪತ್ರದ ಮೂಲಕ ಇಂಧನ ಖರೀದಿಸಿದ ಕುರಿತು ಬಿಲ್ಲುಗಳನ್ನು ಹಾಜರಪಡಿಸಿದ್ದು ಇರುತ್ತದೆ. ಕ್ರೆಡಿಟ್ ಬಿಲ್ ನಿಶಾನೆ ಪಿ–6ರೊಂದಿಗೆ ಹಾಜರಪಡಿಸಿದ ಬಿಲ್‌ಗಳ ಪರಿಶೀಲನೆಯಿಂದ ಸ್ಪಷ್ಟವಾಗಿ ವಾಹನ ಸಂ.2262ಕ್ಕೆ ಇಂಧನವನ್ನು 2017–18ನೇ ಸಾಲಿನಲ್ಲಿ ಹಾಕಿಸಿರುವ ವಿಚಾರ ದಾಖಲಾಗಿರುವುದು ಸ್ಪಷ್ಟವಾಗಿರುತ್ತದೆ. ಜೊತೆಗೆ ನಿಶಾನೆ ಪಿ–12ರೊಂದಿಗೆ ಹಾಜರಪಡಿಸಿದ ಇಂಡೆಂಟ್‌ಗಳಲ್ಲಿ ಸಹ ವಾಹನ ಸಂ.38/ಎಂ 2262 ಈ ವಾಹನಕ್ಕೆ ಇಂಧನವನ್ನು ಹಾಕಿಸಿರುವುದು ಸ್ಪಷ್ಟವಾಗಿರುತ್ತದೆ. ಮತ್ತು ಸದರಿ ವಾಹನ ಪುರಸಭೆಗೆ ಸೇರಿದ ವಾಹನ ಅನ್ನುವ ಕುರಿತು ಯಾವುದೆ ಸಾಕ್ಷ್ಯಾಧಾರಗಳು ಇರುವುದಿಲ್ಲ. ಕಾರಣ ಆ ವಾಹನ ಖಾಸಗಿ ವಾಹನ ಎಂದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

18] ಉಳಿದ ಆಪಾದನೆಗಳಾದ ಇಂಧನ ಭರಿಸಲು ಇಂಡೆಂಟ್‌ಗಳ ನಿರ್ವಹಣೆ ಸರಿಯಾಗಿ ಮಾಡಿರುವುದಿಲ್ಲ. ಹಾಗೂ ಒಂದು ಇಂಡೆಂಟ್ ಪುಸ್ತಕ ಮುಗಿಯದಿದ್ದರೂ ಸಹಾ ಮತ್ತೊಂದು ಇಂಡೆಂಟ್ ಪುಸ್ತಕ ಉಪಯೋಗಿಸಿರುತ್ತಾರೆ ಎನ್ನುವ ಆಪಾದನೆಯನ್ನು ಸಮರ್ಥಿಸುವುದಕ್ಕಾಗಲೀ ಈಗಾಗಲೇ ಹೇಳಿರುವಂತೆ ಪುರಸಭೆ ವಾಹನಗಳನ್ನು ನೋಂದಣಿ ಮಾಡಿಸದೇ ಮತ್ತು ವಾಹನ ಚಾಲಕರ ಚಾಲನಾ ಪರವಾನಗಿ ಪತ್ರವಿಲ್ಲದೆ ವಾಹನಗಳನ್ನು ಚಾಲನೆ ಮಾಡಿರುತ್ತಾರೆ ಅನ್ನುವ

07/10/23

ಆಪಾದನೆಗೂ ಸಹಾ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಈ ವಿಚಾರವನ್ನು ತನಿಖಾಧಿಕಾರಿಯಾದ ಪಿ.ಡಬ್ಲು-2 ರವರು ಕೂಡಾ ತಮ್ಮ ತನಿಖಾ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಅಲ್ಲದೆ ಮುಖ್ಯಾಧಿಕಾರಿಗಳು ತಮ್ಮ ನಿಶಾನೆ ಪಿ-6 ಪತ್ರ ಮೂಲಕ ಎಲ್ಲ ಪುರಸಭೆಯ ಚಾಲಕರ ಚಾಲನಾ ಪರವಾನಿಗೆ ಪತ್ರಗಳ ನಕಲುಗಳನ್ನು ಸಹ ಹಾಜರಪಡಿಸಿದ್ದು ಇರುತ್ತದೆ.

19] ಇನ್ನು ಉಳಿದಂತೆ ಪುರಸಭೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿಲ್ಲ ಅನ್ನುವುದಕ್ಕಾಗಲೀ ಅಥವಾ ಪೌರಕಾರ್ಮಿಕರಿಗೆ ಸಮವಸ್ತ್ರ, ಶೂ, ಗ್ಲೌಸ್ ಮುಂತಾದ ವಸ್ತುಗಳನ್ನು ನೀಡಿರುವುದಿಲ್ಲ ಅನ್ನುವುದಕ್ಕೂ ಮತ್ತು ಕಾಲಕಾಲಕ್ಕೆ ಅವರ ಆರೋಗ್ಯ ತಪಾಸಣೆ ಮಾಡಿರುವುದಿಲ್ಲ ಅನ್ನುವುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಬದಲಾಗಿ, ತನಿಖಾಧಿಕಾರಿಯವರು ಪೌರಕಾರ್ಮಿಕರಾದ ನಾಗಮ್ಮ ತಂದೆ ಶರಣಪ್ಪ, ಶ್ರೀದೇವಿ ಗಂಡ ಬಾಬುರಾವ್ ಸಿಂಧೆ ಅನ್ನುವ ನೌಕರರನ್ನು ವಿಚಾರಿಸಿ ನಿಶಾನೆ ಪಿ-13 ಮತ್ತು 14ರಂತೆ ಅವರ ಹೇಳಿಕೆಯನ್ನು ಮಾಡಿಕೊಂಡಿದ್ದು ಇರುತ್ತದೆ. ಸದರಿ ಹೇಳಿಕೆಯ ಪ್ರಕಾರ ಭಾಲ್ಕಿ ಪುರಸಭೆಯಲ್ಲಿ ಪೌರಕಾರ್ಮಿಕರಿಗೆ ಶೂ, ಗ್ಲೌಸ್, ಮಾಸ್ಕಗಳನ್ನು ಕಾಲಕಾಲಕ್ಕೆ ವಿತರಣೆ ಮಾಡುತ್ತಿದ್ದಾರೆ ಮತ್ತು ಕಾಲಕಾಲಕ್ಕೆ ಅವರ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ ಮತ್ತು ಅಧಿಕಾರಿಗಳು ತಮ್ಮ ಖಾಸಗಿ ಕೆಲಸಗಳಿಗೆ ತಮ್ಮನ್ನು ದುರ್ಬಳಕೆ ಮಾಡಿಕೊಂಡಿರುವುದಿಲ್ಲ ಅನ್ನುವುದನ್ನು ಸ್ಪಷ್ಟಪಡಿಸಿರುತ್ತಾರೆ. ಅಲ್ಲದೆ ನಿಶಾನೆ ಪಿ-12 ರ ಪತ್ರದೊಂದಿಗೆ ಮುಖ್ಯಾಧಿಕಾರಿಗಳು ಪೌರಕಾರ್ಮಿಕರ ಆರೋಗ್ಯ ಮತ್ತು ತಪಾಸಣೆಯ ಛಾಯಾ ಚಿತ್ರಗಳನ್ನು ಹಾಜರಪಡಿಸಿದ್ದು ಇರುತ್ತದೆ. ಮತ್ತು ಸಮವಸ್ತ್ರಗಳನ್ನು ಧರಿಸಿ ಪೌರಕಾರ್ಮಿಕರು ನಿಂತಿರುವ ಪೋಟೋಗಳನ್ನು ಸಹ ಹಾಜರಪಡಿಸಿರುತ್ತಾರೆ. ಈ ಸಾಕ್ಷ್ಯಾಧಾರಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿಯೇ ಹಾಜರಪಡಿಸಿದ್ದು, ಅಸನೌ-1 ಮತ್ತು 2 ಇವರುಗಳು ಆಪಾದನೆಯಂತೆ ವಾಹನ ಚಾಲನಾ ಪರವಾನಿಗೆ ಪತ್ರ ಇಲ್ಲದೆ ಇರುವ ಚಾಲಕರಿಗೆ ಪುರಸಭೆಯ ವಾಹನಗಳ ಚಾಲನೆ ಮಾಡಲು ನೀಡಿರುತ್ತಾರೆ ಎನ್ನುವುದು, ಪೌರಕಾರ್ಮಿಕರಿಗೆ ಕಾಲಕಾಲಕ್ಕೆ ಸೂಕ್ತ ಸಮವಸ್ತ್ರ ಮುಂತಾದವುಗಳನ್ನು ನೀಡುತ್ತಿಲ್ಲ ಅನ್ನುವುದು ಮತ್ತು ಅವರ ಆರೋಗ್ಯ ತಪಾಸಣೆಯನ್ನು

ಮಾಡಿಸುತ್ತಿಲ್ಲ ಎನ್ನುವ ಆಪಾದನೆಗಳನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರ ವಿಫಲವಾಗಿರುತ್ತದೆ ಎಂದು ಹೇಳದೆ ಅನ್ಯ ಮಾರ್ಗವಿರುವುದಿಲ್ಲ.

20] ಅದೇ ರೀತಿ ಪುರಸಭೆಯಿಂದ ಶೌಚಾಲಯ ಕಟ್ಟಿಸುತ್ತಿರುವ ಫಲಾನುಭವಿಗಳ ಹತ್ತಿರ ಅಧಿಕಾರಿಗಳು ಹಣ ಪಡೆದುಕೊಂಡಿರುತ್ತಾರೆ. ಮತ್ತು ಒಂದೇ ಮನೆಗೆ ಎರಡೆರಡು ಶೌಚಾಲಯ ನಿರ್ಮಾಣದ ಅನುದಾನ ನೀಡಿರುತ್ತಾರೆ ಅನ್ನುವ ಆಪಾದನೆಗಳನ್ನು ಸಮರ್ಥಿಸಲು ಯಾವುದೇ ರೀತಿಯ ಸಾಕ್ಷ್ಯಾಧಾರಗಳು ಇರುವುದಿಲ್ಲ ಮತ್ತು ಆ ರೀತಿ ಯಾವುದೇ ಫಲಾನುಭವಿಗಳು ಕೂಡಾ ದೂರನ್ನು ನೀಡಿರುವುದಿಲ್ಲ. ಹೀಗಿರುವಾಗ ಕೇವಲ ದೂರುದಾರರ ಹೇಳಿಕೆಯನ್ನು ಆಧರಿಸಿ ಸದರಿ ಆಪಾದನೆಗಳು ರುಜುವಾತಾಗಿರುತ್ತದೆ ಎಂದು ಹೇಳಲು ಸಾಧ್ಯವಿರುವುದಿಲ್ಲ ಮತ್ತು ಅದು ನ್ಯಾಯಸಮ್ಮತವೂ ಅಲ್ಲ.

21] ಆಸನೌ–1 ಮತ್ತು 2 ರವರುಗಳ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸುತ್ತಾ, ಆಪಾದಿಸಲಾದ ವಿಷಯಗಳ ಕುರಿತು ದೂರುದಾರರು ಈ ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸುವ ಪೂರ್ವದಲ್ಲಿ ಎದುರುದಾರರ ಮೇಲಾಧಿಕಾರಿಗಳಿಗೆ ದೂರನ್ನು ಸಲ್ಲಿಸುವ ಪರ್ಯಾಯ ಮಾರ್ಗವಿತ್ತು. ಕಾರಣ, ಆ ರೀತಿ ಕ್ರಮ ಜರುಗಿಸದೇ ಪ್ರಸ್ತುತ ದೂರನ್ನು ಸಲ್ಲಿಸಿದ್ದು ಕರ್ನಾಟಕ ಲೋಕಾಯುಕ್ತ ಕಾನೂನು ಕಲಂ.8(1) (ಬಿ) ಪ್ರಕಾರ ಯಾವುದೇ ತನಿಖೆಯನ್ನು ಆದೇಶಿಸಲು ಬರಲಾರದು. ಕಾರಣ ಈ ವಿಚಾರಣೆ ಕಾನೂನು ಬಾಹಿರ ಎಂದು ವಾದ ಮಂಡಿಸಿದ್ದು ಅದರ ಸಮರ್ಥನೆಗಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ನಂ.25078–80/2016 (ಜಿಎಂ–ಕೆಎಲ್ಎ) ಪ್ರಕರಣದಲ್ಲಿ ನೀಡಿದ ನಿರ್ಣಯವನ್ನು ಉಲ್ಲೇಖಿಸಿರುತ್ತಾರೆ.

22] ಸದರಿ ನಿರ್ಣಯವನ್ನು ನಾನು ಪರಿಶೀಲಿಸಿದ್ದು, ಆ ನಿರ್ಣಯವನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಲು ಬರಲಾರದು. ಸದರಿ ಪ್ರಕರಣದಲ್ಲಿ ಕಂದಾಯ ದಾಖಲೆಯಲ್ಲಿ ಮಾಡಲಾದಂತಹ ಎಂಟ್ರಿ ಆದೇಶಕ್ಕೆ ಸಂಬಂಧಿಸಿದ್ದು, ಸದರಿ ಆದೇಶವನ್ನು ಪ್ರಶ್ನೆ ಮಾಡಲು ಮೇಲ್ಮನವಿ ಸಲ್ಲಿಸುವ ಅವಕಾಶವಿರುವುದರಿಂದ ಆ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಕರ್ನಾಟಕ ಲೋಕಾಯುಕ್ತ

07/10/23

ಕಾನೂನು ಕಲಂ.8(1) (ಬಿ) ನಿಬಂಧನೆಯನ್ನು ಉಲ್ಲೇಖಿಸಿದ್ದು ಪ್ರಸ್ತುತ ಪ್ರಕರಣದಲ್ಲಿ ಅಡಕವಾಗಿರುವ ಪ್ರಶ್ನೆಯೇ ಬೇರೆ. ಈ ಪ್ರಕರಣದಲ್ಲಿ ಆಸನೌ–1 ಮತ್ತು 2 ರವರುಗಳು ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಪ್ರದರ್ಶಿಸದೆ ಕರ್ತವ್ಯ ಲೋಪವೆಸಗಿರುವ ಆಪಾದನೆಯಾಗಿದ್ದು, ಸದರಿ ವಿಚಾರದ ಕುರಿತು ಈ ಪ್ರಾಧಿಕಾರದಲ್ಲಿ ಕೈಗೊಂಡಿರುವ ವಿಚಾರಣೆ ಕಾನೂನು ಸಮ್ಮತವಾಗಿರುತ್ತದೆ. ಕಾರಣ, ಅಸನೌ–1 ಮತ್ತು 2 ರವರುಗಳ ನ್ಯಾಯವಾದಿಗಳ ವಾದವನ್ನು ಒಪ್ಪಲು ಸಾಧ್ಯವಿರುವುದಿಲ್ಲ.

23] ಈ ಎಲ್ಲ ಕಾರಣಗಳಿಗಾಗಿ ಶಿಸ್ತು ಪ್ರಾಧಿಕಾರದವರು ಕೇವಲ ಪುರಸಭೆಯ ಎಲ್ಲ ವಾಹನಗಳ ಲಾಗ್ ಪುಸ್ತಕ ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ. ಮತ್ತು ಖಾಸಗಿ ವಾಹನ ಸಂ.ಕೆಎ–38/ಎಂ–2262 ವಾಹನಕ್ಕೆ ಪುರಸಭೆಯ ಇಂಡೆಂಟ್ ನೀಡುವ ಮೂಲಕ ಇಂಧನವನ್ನು ಹಾಕಿಸಿ ಅದನ್ನು ಬಳಸಿರುವ ಸಂಗತಿಯನ್ನು ರುಜುವಾತುಪಡಿಸಿರುತ್ತಾರೆ. ಕಾರಣ ಅಸನೌ–1 ಮತ್ತು 2 ರವರುಗಳು ಲಾಗ್ ಪುಸ್ತಕ ಸರಿಯಾಗಿ ನಿರ್ವಹಣೆ ಮಾಡದೆ ಮತ್ತು ಖಾಸಗಿ ವಾಹನಕ್ಕೆ ಪುರಸಭೆಯಿಂದ ಇಂಧನವನ್ನು ಹಾಕಿಸಿ ಅವ್ಯವಹಾರ ಮಾಡಿ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1)(i) ಮತ್ತು (iii) ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಿರುತ್ತಾರೆ.

24] ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸ.ನೌ–1 ಮತ್ತು 2 ರವರ ವಿರುದ್ಧ ಆಪಾದಿಸಲಾದ ಆರೋಪವನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ **ಸಫಲವಾಗಿರುತ್ತದೆ** ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಭಾಗಶ: ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

20



25] **ಅಂಶ–2:– ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

**॥ ನಿರ್ಣಯ ॥**

ಶಿಸ್ತು ಪ್ರಾಧಿಕಾರವು ಅಸನೌ–1 ಮತ್ತು 2 ರವರುಗಳು ಪುರಸಭೆಯ ವಾಹನಗಳ ಲಾಗ್ ಪುಸ್ತಕ ಮತ್ತು ಇಂಧನದ ಇಂಡೆಂಟ್‌ಗಳನ್ನು ಸರಿಯಾಗಿ ನಿರ್ವಹಣೆ ಮಾಡದೆ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1)(i) ಮತ್ತು (iii) ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಿರುತ್ತದೆ.

ಗೌರವಾನ್ವಿತ ಉಪಲೋಕಾಯುಕ್ತ ರವರ ಅನಮೋದನೆಗಾಗಿ ಹಾಗೂ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಅಸನೌ–1 ರವರ ಜನ್ಮ ದಿನಾಂಕ: 17–11–1971
ಅಸನೌ ರವರ ನಿವೃತ್ತಿ ದಿನಾಂಕ: 31–11–2031

ಅಸನೌ–2 ರವರ ಜನ್ಮ ದಿನಾಂಕ: 20–05–1973
ಅಸನೌ ರವರ ನಿವೃತ್ತಿ ದಿನಾಂಕ: 31–05–2033

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

07/10/23

[ಪ್ರಕಾಶ್ ನಾಡಿಗೇರ]
ಅಪರ ನಿಬಂಧಕರು, ವಿಚಾರಣೆಗಳು–19
ಬೆಂಗಳೂರು

॥ಅನುಬಂಧ॥

1] ಡಿ.ಎ ಪರವಾಗಿ ಸಾಕ್ಷಿದಾರರುಗಳ ಪಟ್ಟಿ

| | |
|---|---|
| ಪಿ.ಡಬ್ಲ್ಯೂ–1 | ಶ್ರೀ ರಾಜಕುಮಾರ ಕೆ. ನಿಟ್ಟೂರಕರ್ (ದೂರುದಾರ) |
| ಪಿ.ಡಬ್ಲ್ಯೂ–2 | ಶ್ರೀ ನೀಲಪ್ಪ ಮಲ್ಲಪ್ಪ ಒಲೇಕಾರ, ಡಿ.ಎಸ್.ಪಿ, ಕಲೋ, ಬೀದರ್ |

2] ಡಿ.ಎ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ

| | |
|---|---|
| ನಿಶಾನೆ ಪಿ–1<br>ನಿಶಾನೆ ಪಿ–1(ಎ) | ದೂರುದಾರರ ದೂರು (ಮೂಲ ಪ್ರತಿ)<br>ದೂರುದಾರರ ಸಹಿ |
| ನಿಶಾನೆ ಪಿ–2 | ಪ್ರಪತ್ರ–1 |
| ನಿಶಾನೆ ಪಿ–3 | ಪ್ರಪತ್ರ–2 |
| ನಿಶಾನೆ ಪಿ–4 | ವಾಹನಗಳಿಗೆ ಸಂಬಂಧಪಟ್ಟ 3 ಫೋಟೋಗಳು |
| ನಿಶಾನೆ ಪಿ–5 | ಜಿ.ಟಿ ದೊಡ್ಡಮನಿ, ಪೊಲೀಸ್ ಉಪಾಧೀಕ್ಷಕರು, ಕಲೋ, ಬೀದರ ಇವರ ಪತ್ರ ದಿ:05–01–2018. |
| ನಿಶಾನೆ ಪಿ–6 | ಮುಖ್ಯಾಧಿಕಾರಿಗಳು, ಪುರಸಭೆ, ಭಾಲ್ಕಿ ಇವರು ದಿ:31–01–2019ರಂದು ಡಿ.ಎಸ್.ಪಿ, ಕಲೋ, ಬೀದರ್ ಇವರಿಗೆ ಬರೆದ ಪತ್ರ. |
| ನಿಶಾನೆ ಪಿ–7 | ಮುಖ್ಯಾಧಿಕಾರಿಗಳು, ಪುರಸಭೆ, ಭಾಲ್ಕಿ ಇವರು ದಿ:17–02–2018ರಂದು ಡಿ.ಎಸ್.ಪಿ, ಕಲೋ, ಬೀದರ್ ಇವರಿಗೆ ಬರೆದ ಪತ್ರ. |
| ನಿಶಾನೆ ಪಿ–8 | ಅಸನೌ–2 ವಹಿದ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು ಇವರ ಹೇಳಿಕೆ |
| ನಿಶಾನೆ ಪಿ–9 | ದಿ:17–11–2017ರ ವಾಟ್ಸ್ಪ್ ಪತ್ರ |
| ನಿಶಾನೆ ಪಿ–10 | ಕರ್ನಾಟಕ ರಾಜ್ಯ ಪೌರ ನೌಕರರ ಸೇವಾ ಸಂಘ, ಭಾಲ್ಕಿ ಇವರು ದಿ:27–02–2018ರಂದು ಡಿ.ಎಸ್.ಪಿ, ಕಲೋ, ಬೀದರ್ ಇವರಿಗೆ ಬರೆದ ಪತ್ರ. |
| ನಿಶಾನೆ ಪಿ–11 | ಪೊಲೀಸ್ ಉಪಾಧೀಕ್ಷಕರು, ಕಲೋ, ಬೀದರ ಇವರು ದಿ:23–07–2019ರಂದು ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ಇವರಿಗೆ ಬರೆದ ಪತ್ರ. |
| ನಿಶಾನೆ ಪಿ–12 | ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ಇವರು ದಿ:19–08–2019ರಂದು |

| | |
|---|---|
| | ಪೊಲೀಸ್ ಉಪಾಧೀಕ್ಷಕರು, ಕಲೋ, ಬೀದರ ಇವರಿಗೆ ಬರೆದ ಪತ್ರ. |
| ನಿಶಾನೆ ಪಿ–13 | ಶ್ರೀದೇವಿ ಗಂಡ ಬಾಬುರಾವ್ ಸಿಂಧೆ ಪೌರ ಕಾರ್ಮಿಕ ಇವರ ಹೇಳಿಕೆ |
| ನಿಶಾನೆ ಪಿ–14 | ಶ್ರೀ ನಾಗಮ್ಮ ತಂದೆ ಶರಣಪ್ಪ ಪ್ಯಾಗೆ ಪೌರ ಕಾರ್ಮಿಕ ಇವರ ಹೇಳಿಕೆ |
| ನಿಶಾನೆ ಪಿ–15 | ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ಇವರು ದಿ:25–09–2019ರಂದು ಪೊಲೀಸ್ ಉಪಾಧೀಕ್ಷಕರು, ಕಲೋ, ಬೀದರ ಇವರಿಗೆ ಬರೆದ ಪತ್ರ. |
| ನಿಶಾನೆ ಪಿ–16 | ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ದಿ:24–01–2017ರಂದು ಹೊರಡಿಸಿದ ಸುತ್ತೋಲೆ |
| ನಿಶಾನೆ ಪಿ–17 | ಪೊಲೀಸ್ ಉಪಾಧೀಕ್ಷಕರು, ಕಲೋ, ಬೀದರ ಇವರು ದಿ:26–09–2019ರಂದು ಉಪನಿಬಂಧಕರು (ವಿಚಾರಣೆಗಳು–3) ಕಲೋ, ಬೆಂಗಳೂರು ಇವರಿಗೆ ಸಲ್ಲಿಸಿದ ಪರಿಷ್ಕøತ ವಿಚಾರಣಾ ವರದಿ |
| ನಿಶಾನೆ ಪಿ–18 | ಡಿ.ಎಸ್.ಪಿ, ಕಲೋ, ಬೀದರ ಇವರು ತಮಗೆ ಸಲ್ಲಿಸಿದ ವಿಚಾರಣಾ ವರದಿಯನ್ನು ದಿ:03–10–2019ರಂದು ಸಮುಚಿತ ಮಾರ್ಗದಲ್ಲಿ ಉಪನಿಬಂಧಕರು, ವಿಚಾರಣೆಗಳು–3, ಕಲೋ, ಬೆಂಗಳೂರು ಇವರಿಗೆ ಸಲ್ಲಿಸಿದ ವರದಿ. |
| ನಿಶಾನೆ ಪಿ–19 | ಡಿ.ಎಸ್.ಪಿ, ಕಲೋ, ಬೀದರ ಇವರು ದಿ:16–10–2019ರಂದು ಸಹಾಯಕ ನಿಬಂಧಕರು, ಕಾನೂನು ಸಲಹೆ–2, ಕಲೋ, ಬೆಂಗಳೂರು ಇವರಿಗೆ ಬರೆದ ಪತ್ರ. |

1. ಅಸನೌ ರವರು ತಮ್ಮ ಪರವಾಗಿ ಹಾಜರಪಡಿಸಿದ ದಾಖಲೆಗಳ ಪಟ್ಟಿ

| | |
|---|---|
| ನಿಶಾನೆ ಡಿ–1 | ಪುರಸಭೆ ಭಾಲ್ಕಿ ಕಛೇರಿ ಆದೇಶ ದಿ:04–01–2020. (ದೃಢೀಕೃತ ನಕಲು) |
| ನಿಶಾನೆ ಡಿ–2 | ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ ನಿಯಮಿತ ಇವರ ಕಾರ್ಯಾದೇಶ ದಿ:16–12–2019 (ನಕಲು) |
| ನಿಶಾನೆ ಡಿ–3 | ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ದಿ:03–12–2016 (ನಕಲು) |
| ನಿಶಾನೆ ಡಿ–4 | ಪುರಸಭೆಯ ವಾಹನಗಳಿಗೆ ಪೂರೈಸುವ ಇಂಧನ ಕುರಿತು ಕಡತದ ಸಂಬಂಧಪಟ್ಟ ದಾಖಲೆಗಳು, (ದೃಢೀಕೃತ ನಕಲು) |
| ನಿಶಾನೆ ಡಿ–5 | ಪುರಸಭೆಯ ವಾಹನಗಳಿಗೆ ಇಂಧನ ಬರಿಸುವ ಕುರಿತು ಮಾಡಿದ ಆದೇಶ ಪತ್ರ ದಿ:07–10–2016 (ದೃಢೀಕೃತ ನಕಲು) |

07/01/23

| | |
|---|---|
| ನಿಶಾನೆ ಡಿ–6 | ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ, ಜಿಲ್ಲಾಧಿಕಾರಿಗಳ ಕಛೇರಿ ಬೀದರ ಇವರು ಹೊರಗುತ್ತಿಗೆ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್, ಸ್ವಚ್ಚತ ಪೌರಕಾರ್ಮಿಕರ ಸೇವೆಯನ್ನು ಮುಂದುವರೆಸುವ ಬಗ್ಗೆ ಮಾಡಿದ ನಿಯೋಜನೆ ಮೇಲೆ ಕಳುಹಿಸಿದ ಆದೇಶದ (ದೃಢೀಕೃತ ನಕಲು.) |
| ನಿಶಾನೆ ಡಿ–7 | 2017–18ನೇ ಸಾಲಿನ ಪುರಸಭೆಯ ಸೋನಾಲಿಕ ಟ್ರ್ಯಾಕ್ಟರ್ ಕೆಎ–28 ಎನ್‌ಟಿಓ 13629 ಲಾಗ್ ಪುಸ್ತಕ. |
| ನಿಶಾನೆ ಡಿ–8 | 2017–18ನೇ ಸಾಲಿನ ಪುರಸಭೆಯ ಇನ್ನೊಂದು ಸೋನಾಲಿಕ ಟ್ರ್ಯಾಕ್ಟರ್ ನಂ.ಕೆ–28 ಎನ್‌ಟಿಓ 13630 ಲಾಗ್ ಪುಸ್ತಕ |
| ನಿಶಾನೆ ಡಿ–9 | 2017–18ನೇ ಸಲಿನ ಪುರಸಭೆಯ ಕೆಎ–39/9063 ಜೆ.ಸಿ.ಬಿ ಗೆ ಸಂಬಂಧಿಸಿದ ಲಾಗ್ ಪುಸ್ತಕ |
| ನಿಶಾನೆ ಡಿ–10 | ಪುರಸಭೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಚಾಲಕರುಗಳಿಗೆ ಸಂಬಂಧಿಸಿದ ಚಾಲನಾ ಪರವಾನಿಗೆ ದಾಖಲೆಗಳು. |
| ನಿಶಾನೆ ಡಿ–11 | ಮುಖ್ಯಾಧಿಕಾರಿಗಳು, ಪುರಸಭೆ, ಭಾಲ್ಕಿ ಇವರು ದಿ:09–12–2017ರಂದು ಪೌರಾಯುಕ್ತರು, ನಗರಸಭೆ, ಬೀದರ ಇವರಿಗೆ ಲ್ಯಾಡರ್ ವಾಹನಗಳನ್ನು ಹಸ್ತಾಂತರಿಸುವ ಕುರಿತು ಬರೆದ ಪತ್ರ. |
| ನಿಶಾನೆ ಡಿ–12 | ಇಂಧನಕ್ಕೆ ಸಂಬಂಧಿಸಿದ ಬಿಲ್‌ಗಳ ದೃಢೀಕೃತ ನಕಲುಗಳು. |

1] ಅಸನೌ ರವರ ಪರ ಸಾಕ್ಷಿದಾರರುಗಳ ಪಟ್ಟಿ

| | |
|---|---|
| ಡಿಡಬ್ಲ್ಯೂ–1 | ಶ್ರೀ ಎಸ್. ಶಿವಕುಮಾರ್ ಲೇಟ್ ಸಿದ್ದರಾಮಪ್ಪ, ಮುಖ್ಯಾಧಿಕಾರಿ |
| ಡಿಡಬ್ಲ್ಯೂ–2 | ಶ್ರೀ ವಾಹಿದಪಾಷಾ ಲೇಟ್ ಸಲಿಂಸಾಬ್, ಆರೋಗ್ಯ ನಿರೀಕ್ಷಕರು |

[ಪ್ರಕಾಶ್ ನಾಡಿಗೇರ]
ಅಪರ ನಿಬಂಧಕರು, ವಿಚಾರಣೆಗಳು–19
ಬೆಂಗಳೂರು

# ಕರ್ನಾಟಕ ಸರ್ಕಾರ

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ/50/2021/ಎ.ಆರ್.ಇ-19

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 27ನೇ ಅಕ್ಟೋಬರ್ 2023.

## -:: ಶಿಫಾರಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರುಗಳಾದ ಶ್ರೀಯುತರು:

(1) ಎಸ್.ಶಿವಕುಮಾರ್, ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ; ಮತ್ತು

(2) ವಹೀದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ:ನಅಇ 24 ಡಿಎಂಕೆ 2020, ಬೆಂಗಳೂರು, ದಿನಾಂಕ: 17/03/2021.

(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್-1/ಡಿಇ/ 50/2021, ಬೆಂಗಳೂರು, ದಿನಾಂಕ: 01/04/2021.

(3) ಅಪರ ನಿಬಂಧಕರು ವಿಚಾರಣೆಗಳು-19, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 07/10/2023.

*****

ಸರ್ಕಾರದ ಆದೇಶ ದಿನಾಂಕ: 17/03/2021 ರಂತೆ (1) ಶ್ರೀ ಎಸ್.ಶಿವಕುಮಾರ್, ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ; ಮತ್ತು (2) ಶ್ರೀ ವಹೀದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ (ಇನ್ನು

ಮುಂದೆ ಆಪಾದಿತ ಸರ್ಕಾರಿ ನೌಕರರುಗಳು ಅಂದರೆ ಚಿಕ್ಕದಾಗಿ '1 ಮತ್ತು 2ನೇ ಆ.ಸ.ನೌಕರರುಗಳು' ಎಂದು ಸಂಭೋದಿಸಲಾಗುವುದು) ರವರುಗಳ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್–1/ಡಿ.ಇ/50/2021, ಬೆಂಗಳೂರು, ದಿನಾಂಕ: 01/04/2021ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು–19 ರವರಿಗೆ 1 ಮತ್ತು 2ನೇ ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. **1ನೇ ಆ.ಸ.ನೌಕರರಾದ** ಶ್ರೀ ಎಸ್.ಶಿವಕುಮಾರ್, ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ; ಮತ್ತು **2ನೇ ಆ.ಸ.ನೌಕರರಾದ** ಶ್ರೀ ವಹೀದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರುಗಳ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

**ಅನುಬಂಧ–1**

**ದೋಷಾರೋಪಣೆ**

(1) 2017–18ನೇಯ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ ವಾಹನಗಳಿಗೆ ಡೀಸೆಲ್ ಹಾಕಿಸುವ ನೆಪದಲ್ಲಿ ಖಾಸಗಿ ವಾಹನಗಳಿಗೆ ಡೀಸೆಲ್ ಹಾಕಿಸಿ ಅವ್ಯವಹಾರ ನಡೆಸಿರುತ್ತೀರಿ.

(2) ಇಲಾಖೆಯ ನಿಯಮಾವಳಿಗಳನ್ನು ಪಾಲನೆ ಮಾಡದೆ ಖಾಸಗಿ ವಾಹನ ಸಂ.ಕೆಎ–38/ಎಂ–2862 (ಮುಖ್ಯಾಧಿಕಾರಿಯವರು ಉಪಯೋಗಿಸುವ ವಾಹನ)ಕ್ಕೆ ಪುರಸಭೆಯ ಇಂಡೆಂಟ್ ಮೂಲಕ ಇಂಧನ ಬಳಕೆ ಮಾಡಿಕೊಂಡು, ವಾಹನದ ಲಾಗ್ ಪುಸ್ತಕ ನಿರ್ವಹಣೆ ಮಾಡದೆ, ಲಾಗ್ ಪುಸ್ತಕಗಳು ಇಲ್ಲದೆ ಇಂಧನ ಬಾಬ್ತು ಹಣ ಮಂಜೂರು ಮಾಡಿ ನೀವು ಕರ್ತವ್ಯಲೋಪವೆಸಗಿರುತ್ತೀರಿ.

(3) ಪುರಸಭೆ ವಾಹನಗಳನ್ನು ಹೊರತುಪಡಿಸಿ ಖಾಸಗಿ ವಾಹನಗಳಿಗೆ ಪುರಸಭೆಯ ಇಂಡೆಂಟ್ ಮೂಲಕ ಇಂಧನ ಹಾಕಿಸಿ ಸದರಿ ಇಂಧನದ ಹಣವನ್ನು ಪಾವತಿ ಮಾಡಿ ಪುರಸಭೆಯ ಅನುದಾನ ದುರುಪಯೋಗಪಡಿಸಿಕೊಂಡಿರುತ್ತೀರಿ.

(4) ವಾಹನಗಳಿಗೆ ಇಂಧನ ಬರಿಸಲು ನೀಡುವ ಇಂಡೆಂಟ್‌ಗಳ ನಿರ್ವಹಣೆ ಸರಿಯಾಗಿ ಮಾಡಿರುವುದಿಲ್ಲ ಹಾಗೂ ಒಂದು ಇಂಡೆಂಟ್ ಪುಸ್ತಕ *ಮುಗಿಯದಿದ್ದರೂ* ಸಹ ಮತ್ತೊಂದು ಇಂಡೆಂಟ್ ಉಪಯೋಗಿಸುತ್ತೀರಿ.

(5) ಪುರಸಭೆಗೆ ಸಂಬಂಧಪಟ್ಟ ವಾಹನಗಳನ್ನು ನೋಂದಣಿ ಮಾಡಿಸದೆ ಹಾಗೆಯೇ ಚಾಲನೆ ಮಾಡುತ್ತಿರುತ್ತೀರಿ ಹಾಗೂ ಪುರಸಭೆಯಲ್ಲಿ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕ ಅಥವಾ ವಾಹನ ಚಾಲಕರು ಚಾಲನ ಪರವಾನಗಿ ಇಲ್ಲದೆ ಪುರಸಭೆಯ ವಾಹನಗಳನ್ನು ಚಾಲನೆ ಮಾಡಿಸಿದ್ದೀರಿ.

(6) ಪುರಸಬೇಯ ಪರಿಮಿತಿಯಲ್ಲಿ ಚರಂಡಿ ಸ್ವಚ್ಚತಾ ಕಾರ್ಯ ಸರಿಯಾಗಿ ನಿರ್ವಹಿಸುತ್ತಿಲ್ಲ ಹಾಗೂ ಪೌರಕಾರ್ಮಿಕರಿಗೆ ಸಮವಸ್ತ್ರ, ಶೂ, ಗ್ಲೌಸ್ ಮತ್ತು ಇನ್ನಿತರ ವಸ್ತುಗಳನ್ನು ವಿತರಣೆ ಮಾಡುತ್ತಿಲ್ಲ ಹಾಗೂ ಕಾಲಕಾಲಕ್ಕೆ ಪೌರಕಾರ್ಮಿಕರ ಆರೋಗ್ಯ ತಪಾಸಣೆ ಮಾಡಿಸುತ್ತಿಲ್ಲ ಮತ್ತು ಪೌರಕಾರ್ಮಿಕರನ್ನು ನಿಮ್ಮ ಖಾಸಗಿ ಕೆಲಸಕ್ಕೆ ಬಳಸಿಕೊಂಡಿದ್ದೀರಿ.

(7) ಪುರಸಭೆಯಿಂದ ಶೌಚಾಲಯ ಕಟ್ಟಿಸುತ್ತಿರುವ ಫಲಾನುಭವಿಗಳ ಹತ್ತಿರ ಅಧಿಕಾರಿಗಳು ಹಣವನ್ನು ತೆಗೆದುಕೊಂಡಿದ್ದೀರಿ ಹಾಗೂ ಹಣ ತೆಗೆದುಕೊಂಡು ಒಂದೇ ಮನೆಗೆ ಎರಡೆರಡು ಶೌಚಾಲಯ ನಿರ್ಮಾಣದ ಅನುದಾನ ನೀಡಿರುತ್ತೀರಿ.

ಆದ್ದರಿಂದ, ಸರ್ಕಾರಿ ನೌಕರರಾದ ನೀವು, ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಪರಿಪೂರ್ಣ ಪ್ರಾಮಾಣಿಕತೆ ತೋರಿಸದೇ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಿರೆಂದು ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ, ನಿಬಂಧ ಮತ್ತು ಮೇಲ್ಮನವಿ) 1957ರ ಮೇರೆಗೆ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–19), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, **1ನೇ ಆ.ಸ.ನೌಕರರಾದ** ಶ್ರೀ ಎಸ್.ಶಿವಕುಮಾರ್, ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ; ಮತ್ತು **2ನೇ ಆ.ಸ.ನೌಕರರಾದ** ಶ್ರೀ ವಹೀದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರುಗಳ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ಭಾಗಶಃ ಸಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು 1 ಮತ್ತು 2ನೇ ಆ.ಸ.ನೌಕರರುಗಳ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಇಬ್ಬರು ಸಾಕ್ಷಿಗಳನ್ನು ಅಂದರೆ ಪಿ.ಡಬ್ಲ್ಯೂ–1 ಮತ್ತು ಪಿ.ಡಬ್ಲ್ಯೂ–2 ರಂತೆ ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ಪಿ–19 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. 1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರುಗಳು ಸ್ವತ: ತಾವೇ ಕ್ರಮವಾಗಿ ಡಿ.ಬ್ಲ್ಯೂ–1 ಮತ್ತು ಡಿ.ಬ್ಲ್ಯೂ–2 ಎಂಬ ಸಾಕ್ಷಿಗಳಾಗಿ ವಿಚಾರಣೆ ಮಾಡಿಕೊಂಡು, ನಿಶಾನೆ ಡಿ–1 ಮತ್ತು ಡಿ–12 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. 1 ಮತ್ತು 2ನೇ ಆ.ಸ.ನೌಕರರುಗಳ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸುವಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಆ.ಸ.ನೌಕರರುಗಳ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, 1ನೇ ಆ.ಸ.ನೌಕರರಾದ ಶ್ರೀ ಎಸ್.ಶಿವಕುಮಾರ್ ರವರು ದಿನಾಂಕ: 30/11/2031 ರಂದು ನಿವೃತ್ತಿ ಹೊಂದಲಿದ್ದಾರೆ ಮತ್ತು 2ನೇ ಆ.ಸ.ನೌಕರರಾದ ಶ್ರೀ ವಹೀದ್ ಪಾಷಾ ರವರು ದಿನಾಂಕ: 31/05/2033 ರಂದು ನಿವೃತ್ತಿ ಹೊಂದಲಿದ್ದಾರೆ.

8. **1ನೇ ಆ.ಸ.ನೌಕರರಾದ** ಶ್ರೀ ಎಸ್.ಶಿವಕುಮಾರ್, ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ; ಮತ್ತು **2ನೇ ಆ.ಸ.ನೌಕರರಾದ** ಶ್ರೀ ವಹೀದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರುಗಳ ವಿರುದ್ಧ ಸಾಬೀತಾಗಿರುವ ಆರೋಪದ ಸ್ವರೂಪವನ್ನು ಹಾಗೂ ಸಂದರ್ಭಗಳ ಸಂಪೂರ್ಣತೆಯನ್ನು

ಪರಿಗಣಿಸಿ, ಆರೋಪಗಳನ್ನು ರುಜುವಾತುಪಡಿಸುವಲ್ಲಿ **'ಭಾಗಶಃ ಸಫಲವಾಗಿರುತ್ತದೆ'** ಎಂದು ನಿರ್ಣಯಿಸಿದೆ:-

(1) 1ನೇ ಆ.ಸ.ನೌಕರರಾದ ಶ್ರೀ ಎಸ್.ಶಿವಕುಮಾರ್, ಮುಖ್ಯಾಧಿಕಾರಿ, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರಿಗೆ ಪಾವತಿಸಬೇಕಾಗಿರುವ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯಲು ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

(2) 2ನೇ ಆ.ಸ.ನೌಕರರಾದ ಶ್ರೀ ವಹೀದ್ ಪಾಷಾ, ಕಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ ರವರಿಗೆ ಪಾವತಿಸಬೇಕಾಗಿರುವ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯಲು ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

9. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು. ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

27/12/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.